ಪ್ರತಿಬಿಂಬ

PRATIBIMBA-Multidisciplinary Kannada Research Journal of IIMRD
ISSN: 2582-2284
Vol-5, Special Issue-1, Sep-Oct, 2023, Pp. 136-138.
©IIMRD, Mysuru.
IIMRD JOURNALS
www.iimrd.com

# ಮೈಸೂರು ಒಡೆಯರ ಕಾಲದ ಗ್ರಂಥ ಭಂಡಾರ

**ವೇಣುಗೋಪಾಲ್ ಎಂ.***
*ಗ್ರಂಥಪಾಲಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು.

***ಸಾರಾಂಶ: (Abstract)***

*ವಿಶ್ವದ ಇತಿಹಾಸದಲ್ಲಿ ಕಂಡ ಅದ್ವಿತೀಯ ಅರಸು ಮನೆತನವೆಂದರೆ ಅದು ಮೈಸೂರಿನ ಒಡೆಯರು. ಈ ರಾಜವಂಶವು 1399ರಿಂದ 1947ರವರೆಗೆ ಮೈಸೂರು ಸಂಸ್ಥಾನವನ್ನು ಆಳಿದ ರಾಜವಂಶ. 1947ರಲ್ಲಿ ಸ್ವಾತಂತ್ರ್ಯಾನಂತರ ಭಾರತ ಗಣರಾಜ್ಯಕ್ಕೆ ಮೈಸೂರು ಸಂಸ್ಥಾನ ಸೇರಿಕೊಂಡ ನಂತರದ ಈ ರಾಜವಂಶದ ಆಡಳಿತ ಕೊನೆಗೊಂಡಿತು. ಇಷ್ಟು ಸುದೀರ್ಘವಾಗಿ ಮೈಸೂರನ್ನು ಆಳಿದ ಒಡೆಯರ್ ಮನೆತನವು ಅಂದಿನ ಮೈಸೂರು ಸಂಸ್ಥಾನದಲ್ಲಿ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಹೀಗೆ ಮೈಸೂರು ಒಡೆಯರ್‌ರವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಸೇವೆಯ ಜೊತೆ-ಜೊತೆಗೆ ಪುಸ್ತಕ ಸಂಗ್ರಹ ಕಾರ್ಯಗಳಿಗೂ ಹೆಚ್ಚಿನ ಒತ್ತು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದ ಉದ್ದೇಶ ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣವಾದ ಗ್ರಂಥಭಂಡಾರಗಳು, ಅವುಗಳ ಬೆಳವಣಿಗೆ ಹಾಗೂ ಪ್ರಸ್ತುತ ನಿರ್ವಹಿಸುತ್ತಿರುವ ಕಾರ್ಯಗಳ ವಿಶ್ಲೇಷಣೆಯಾಗಿದೆ.*

***ಮುಖ್ಯಪದಗಳು (Keywords):*** *ಮೈಸೂರು ಒಡೆಯರು, ಗ್ರಂಥಗಳು, ಭಂಡಾರ, ಪಾಠಶಾಲೆ, ಹಸ್ತಪ್ರತಿಗಳು.*

**ಪೀಠಿಕೆ**

ಮೈಸೂರಿನ ಇಪ್ಪತ್ತಮೂರನೇ ಮಹಾರಾಜರಾಗಿದ್ದ ಹತ್ತನೇ ಚಾಮರಾಜೇಂದ್ರ ಒಡೆಯರ್ ಅವರು ಮೈಸೂರಿನ ಓರಿಯಂಟಲ್ ಗ್ರಂಥಾಲಯದ ಪೋಷಕರಾಗಿದ್ದರು. ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಮತ್ತು ಸಂಸ್ಕೃತ ಅಧ್ಯಯನಕ್ಕೆಂದು ಮಹಾರಾಜ ಸಂಸ್ಕೃತ ಪಾಠಶಾಲೆಯನ್ನು ತೆರೆದಿದ್ದರು. ಮತ್ತೊಬ್ಬ ಮೈಸೂರು ಒಡೆಯರ್ ಅಭಿವೃದ್ಧಿಯ ಹರಿಕಾರ, ಉದಾರವಾದಿ ಮತ್ತು ದೂರದೃಷ್ಟಿಯುಳ್ಳ ನಾಲ್ವಡಿ ಕೃಷ್ಣರಾಜ ಒಡೆಯರ್ (1884–1940) ಅವರು 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಈ ವಿಶ್ವವಿದ್ಯಾನಿಲಯ ಅಂದಿನ ಭಾರತದ ಆರನೇ ಮತ್ತು ಕರ್ನಾಟಕದ ಮೊದಲ ವಿಶ್ವವಿದ್ಯಾನಿಲಯವಾಗಿ ಅಂದಿನಿಂದ ಇಂದಿನವರೆಗೂ ಉತ್ತಮ ಕಾರ್ಯವನ್ನು ನಿರ್ವಹಿಸಿಕೊಂಡು ಬಂದಿದೆ. ಪ್ರಸಾರಾಂಗದ ಮೂಲಕ ಅನೇಕ ಪ್ರಚಾರೋಪನ್ಯಾಸ ಮಾಲೆ, ಪುಸ್ತಕ ಪ್ರಕಟಣೆ ಹಾಗೂ ಗ್ರಂಥ ಸಂಗ್ರಹಕಾರ್ಯವನ್ನು ಮಾಡುತ್ತಾ ಅಂದಿನಿಂದ ಇಂದಿನವರೆಗೂ ಅಪಾರವಾದ ಗ್ರಂಥಭಂಡಾರವನ್ನು ಹೊಂದಿದೆ. ಹೀಗೆ ಮೈಸೂರು ಒಡೆಯರ್ ಪೋಷಿಸಿದ ಮತ್ತು ಸ್ಥಾಪಿಸಿದ ಗ್ರಂಥಭಂಡಾರದ ವಿವರಣೆ ಮತ್ತು ಅವುಗಳ ಕೆಲಸ ಕಾರ್ಯಗಳು ಈ ಮುಂದಿನಂತಿದೆ.

*Please cite this article as:* ವೇಣುಗೋಪಾಲ್. ಎಂ. (2023). ಮೈಸೂರು ಒಡೆಯರ ಕಾಲದ ಗ್ರಂಥ ಭಂಡಾರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ. 136–138.*

**ಸರಸ್ವತಿ ಗ್ರಂಥ ಭಂಡಾರ**

ಮೈಸೂರಿನ ಅಂಬಾವಿಲಾಸ ಅರಮನೆಯಲ್ಲಿ ಸರಸ್ವತಿ ಗ್ರಂಥಭಂಡಾರವನ್ನು ಕಾಣಬಹುದು. **'ಮೈಸೂರು ಗೆಜೆಟಿಯರ್'** ಪ್ರಕಾರ ಅರಮನೆಯು ಬೆಂಕಿ ದುರಂತದಿಂದಾಗಿ 1897ರಲ್ಲಿ ಅಗ್ನಿ ಅನಾಹುತದಿಂದ ನಾಶವಾಗುತ್ತದೆ. ಅಗ್ನಿ ಅನಾಹುತ ಆಗುವುದಕ್ಕೂ ಮೊದಲು ಮರದ ಅರಮನೆಯ ಹೇಗಿತ್ತು ಎಂಬುದರ ವರ್ಣನೆ ಮಾಡುವಾಗ ಅರಮನೆಯ ಉತ್ತರ ಪಾರ್ಶ್ವದಲ್ಲಿ ಆಯುಧ ಶಾಲೆ ಮತ್ತು ಗ್ರಂಥ ಭಂಡಾರ ಮೊದಲಾದ ಕಛೇರಿಗಳಿದ್ದವು ಎಂಬುದು ತಿಳಿದುಬರುತ್ತದೆ.[1] ನಂತರದಲ್ಲಿ ಹೊಸ ಅರಮನೆಯನ್ನು ಪುನರ್ ಸ್ಥಾಪಿಸಿದಾಗ ಅರಮನೆಯಲ್ಲಿ ಗ್ರಂಥಭಂಡಾರವನ್ನು ಸ್ಥಾಪಿಸಲಾಯಿತು. ಅಮೂಲ್ಯ ಪುಸ್ತಕಗಳ ಸಂಗ್ರಹವನ್ನು ಹೊಂದಿರುವ ಈ ಭಂಡಾರಕ್ಕೆ 'ಸರಸ್ವತಿ ಗ್ರಂಥಭಂಡಾರ' ಎಂದು ಹೆಸರಿಡಲಾಗಿದೆ.

ಸುಮಾರು 300 ಪ್ರಾಚೀನವಾದ ಕನ್ನಡ ಹಸ್ತಪ್ರತಿಗಳ ಭಂಡಾರವಿದೆ. ಅರಮನೆಯ ಈ ಸರಸ್ವತಿ ಭಂಡಾರದ ಹಸ್ತಪ್ರತಿಗಳು ಬಹಳ ಹಿಂದೆಯೆ ಸಂಗ್ರಹಿಸಿರುವಂತದ್ದು. **"ದಿ ಲಿಸ್ಟ್ ಆಫ್ ದಿ ಅನ್ಪ್ರಿಂಟೆಡ್ ಸಂಸ್ಕೃತ ಅಂಡ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಪ್ಯಾಲೇಸ್ ಸಂಸ್ಕೃತಿ ಭಂಡಾರ"** ಹೆಸರಿನಿಂದ ಸರಸ್ವತಿ ಭಂಡಾರದಲ್ಲಿರುವ 103 ಹಸ್ತಪ್ರತಿಗಳ ಸೂಚಿಯನ್ನು ಕಾಣಬಹುದು.[2] ಇದರ ಪ್ರಕಾರ ಈ ಗ್ರಂಥಭಂಡಾರದಲ್ಲಿ ಸಂಸ್ಕೃತ ಹಸ್ತಪ್ರತಿಗಳ ಸಂಗ್ರವಿದೆ ಎಂಬುದು ತಿಳಿಯುತ್ತದೆ. ಹಸ್ತಪ್ರತಿಗಳ ಅಧ್ಯಯನ, ಇತಿಹಾಸ, ಸಾಂಸ್ಕೃತಿಕ ಅಧ್ಯಯನಕ್ಕೆ ಈ ಗ್ರಂಥಾಲಯದಲ್ಲಿ ಅಮೂಲ್ಯ ಗ್ರಂಥಗಳು ಪರಾಮರ್ಶನಕ್ಕೆ ದಕ್ಕುತ್ತವೆ.

ಆರ್.ನರಸಿಂಹಾಚಾರ್ ಅವರು ತಮ್ಮ ಕವಿಚರಿತೆ ದ್ವಿತೀಯ ಸಂಪುಟವನ್ನು ಬರೆಯುವುದಕ್ಕಾಗಿ ಮದರಾಸ್ ಪ್ರಾಚ್ಯಕೋಶಾಲಯ, ಮೈಸೂರು ಪ್ರಾಚ್ಯಕೋಶಾಲಯ ಮತ್ತು ಮೈಸೂರು ಮಹಾರಾಜರವರ ಅರಮನೆಗೆ ಸೇರಿದ ಸರಸ್ವತಿ ಭಂಡಾರದಲ್ಲಿ ಅಧ್ಯಯನ ನಡೆಸಿರುವುದಾಗಿ ಕವಿಚರಿತೆಯ ಸಂಪುಟದ ಪ್ರಾರಂಭದಲ್ಲಿ ಬರೆದುಕೊಂಡಿದ್ದಾರೆ.[3] ಕನ್ನಡದ ಬಹುತೇಕ ಸಾಹಿತ್ಯ ಚರಿತ್ರೆಗಳು ರಚನೆಯಾಗಿ ಸಾಹಿತ್ಯಾಸಕ್ತರಿಗೆ ಇಂದಿಗೂ ಓದಲು ದಕ್ಕುವುದಕ್ಕೆ ಸಹಾಯವಾಗಿರುವ ಸಾಹಿತ್ಯ ಭಂಡಾರ ಇದು. ಮೈಸೂರು ಅರಮನೆಗೆ ಭೇಟಿ ನೀಡಿದರೆ ಇಂದಿಗೂ ಸರಸ್ವತಿ ಸಾಹಿತ್ಯ ಭಂಡಾರವನ್ನು ಕಾಣಬಹುದು.

**ಓರಿಯಂಟಲ್ ಲೈಬ್ರರಿ**

1891ರಲ್ಲಿ ಹತ್ತನೇ ಚಾಮರಾಜೇಂದ್ರ ಒಡೆಯರ್ ಆಶ್ರಯದಲ್ಲಿ ಕೃಷ್ಣರಾಜ ಬುಲೆವಾರ್ಡ್ ಉತ್ತರದ ತುದಿಯಲ್ಲಿದೆ. ಇಂದಿನ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನ ಪಕ್ಕದಲ್ಲಿದೆ. ಈ ಕಟ್ಟಡವು 1887 ರಲ್ಲಿ ವಿಕ್ಟೋರಿಯ ರಾಣಿ ಬ್ರಿಟಿಷ್ ಸಿಂಹಾಸನವನ್ನು ಅಲಂಕರಿಸಿದ ನೆನಪಿಗಾಗಿ ಜುಬಲಿ ಹಾಲ್ ನಿರ್ಮಿಸಲಾಗಿತ್ತು. ಈ ಹಾಲ್‌ನಲ್ಲಿ ಓರಿಯಂಟಲ್ ಲೈಬ್ರರಿ ಸ್ಥಾಪನೆಯಾಯಿತು. ಭಾರತೀಯ ಸಾಹಿತ್ಯ, ಕಲೆ, ಸಂಸ್ಕೃತಿಗೆ ಸಂಬಂಧಿಸಿದ ಪ್ರಾಚೀನ ಕೃತಿಗಳನ್ನು ಸಂಪಾದಿಸಿ ಪ್ರಕಟಿಸುವ ಉದ್ದೇಶದಿಂದ ಈ ಸಂಸ್ಥೆ ಸ್ಥಾಪಿಸಲಾಯಿತು. ಈ ಸಂಸ್ಥೆಯಲ್ಲಿ 33000 ಕ್ಕೂ ಹೆಚ್ಚು ಸಂಸ್ಕೃತ, ಇಂಗ್ಲಿಷ್, ಕನ್ನಡ, ತೆಲುಗು, ಮರಾಠಿ, ಹಿಂದಿ ಭಾಷೆಯ ಗ್ರಂಥಗಳನ್ನು ಕಾಣಬಹುದು. ಅರವತ್ತು ಸಾವಿರಕ್ಕೂ ಹೆಚ್ಚು ತಾಳೆ ಗರಿಯ ಹಸ್ತಪ್ರತಿಯ ಸಂಗ್ರಹವಿದೆ. 1943 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಭಾಗವಾದ ಈ ಲೈಬ್ರರಿ ಓರಿಯಂಟಲ್ ರಿಸರ್ಚ್

ಇನ್ಸ್ಟಿಟ್ಯೂಟ್ ಎಂದು ಮರುನಾಮಕರಣ ಪಡೆಯಿತು. ಮೈಸೂರಿಗೆ ಭೇಟಿಕೊಡುವ ಪ್ರತಿಯೊಬ್ಬರು ಈ ಸಂಶೋಧನಾ ಸಂಸ್ಥೆಯನ್ನು ಭೇಟಿ ನೀಡಲೇಬೇಕಾದ ಸ್ಥಳ.

**ಮಿಥಿಕ್ ಸೊಸೈಟಿ**

ದಕ್ಷಿಣ ಇಂಡಿಯಾದ ಇತಿಹಾಸ ಅಧ್ಯಯನದ ಉದ್ದೇಶದಿಂದ ಸ್ಥಾಪನೆಯಾದ ಈ ಸಂಸ್ಥೆಯಲ್ಲಿ ನಲವತ್ತೈದು ಸಾವಿರಕ್ಕೂ ಹೆಚ್ಚಿನ ಪುಸ್ತಕ ಸಂಗ್ರಹವಿದೆ. ಬೆಂಗಳೂರಿನಲ್ಲಿ 1909ರಲ್ಲಿ ಇತಿಹಾಸ, ಪುರಾಣ, ಸಂಸ್ಕೃತಿ ಹಾಗೂ ಜನಾಂಗೀಯ ಅಧ್ಯಯನಕ್ಕೆಂದೇ ಪ್ರಾರಂಭವಾದ ಸಂಸ್ಥೆ ಮಿಥಿಕ್ ಸೊಸೈಟಿ. ಈ ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿ ಡಾ. ಮೊರಿಸ್ ಡಬ್ಲ್ಯೂ ಟಾವರ್ಷ್ ಇದ್ದರೂ ಈ ಸಂಸ್ಥೆಯ ಪೋಷಕಕಾರಾಗಿದ್ದವರು ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು. ಈ ಸಂಸ್ಥೆಯ ಗ್ರಂಥಭಂಡಾರ ಪ್ರಾರಂಭದಲ್ಲೇ ಹಲವು ಪುಸ್ತಕಗಳನ್ನು ಸಂಗ್ರಹಿಸಿತ್ತು.

ಫಾದರ್ ಎ.ಎಂ. ತಬಾ ಅವರು ವೈಯಕ್ತಿಕವಾಗಿ ಸಂಗ್ರಹಿಸಿಕೊಂಡಿದ್ದ ಉಪಯುಕ್ತ ಗ್ರಂಥಗಳನ್ನು ಮಿಥಿಕ್ ಸೊಸೈಟಿಗೆ ದಾನವಾಗಿ ನೀಡಿದರು. ನಂತರ ಸರ್ ಹ್ಯೂಗ್ ಡ್ಯಾಲಿ ಅವರು ತಮ್ಮ ಓದಿಗಾಗಿ ಸಂಗ್ರಹಿಸಿಕೊಂಡಿದ್ದ ಗ್ರಂಥಗಳನ್ನು ನೀಡಿದರು. ಹೀಗೆ ಪುಸ್ತಕಗಳ ಸಂಗ್ರಹವನ್ನು ಪ್ರಾರಂಭಿಸಿದ ಈ ಗ್ರಂಥಾಲಯದಲ್ಲಿ ಪ್ರಸ್ತುತ 46,000ಕ್ಕೂ ಹೆಚ್ಚಿನ ಗ್ರಂಥವನ್ನು ಹೊಂದಿದೆ. ಪ್ರಾರಂಭದ ಹಂತದಲ್ಲಿ ಪುಸ್ತಕವನ್ನು ಎರವಲು ಕೊಡುವ ಪದ್ಧತಿ ಇದ್ದಿತ್ತಾದರು ಈ ವ್ಯವಸ್ಥೆಯಿಂದ ಬಹಳಷ್ಟು ಪುಸ್ತಕಗಳು ಕೈತಪ್ಪಿ ಹೋಗುತ್ತಿದ್ದ ಕಾರಣ ಪರಾಮರ್ಶನಕ್ಕಾಗಿ ಗ್ರಂಥಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಇತಿಹಾಸ, ಪುರಾಣ, ಸಾಹಿತ್ಯ ಮೊದಲಾದ ವಿಷಯಗಳ ಸಂಶೋಧಕರಿಗೆ, ಅಧ್ಯಯನಕಾರರಿಗೆ ಅತ್ಯಮೂಲ್ಯ ಪುಸ್ತಕಗಳು ಪರಾಮರ್ಶನಕ್ಕಾಗಿ ದೊರೆಯುತ್ತದೆ.

ಹೀಗೆ ಮೈಸೂರು ಒಡೆಯರ್ ಅವರು ಅಪಾರವಾದ ಗ್ರಂಥಗಳ ಪ್ರಕಟಣೆ ಮತ್ತು ಸಂಗ್ರಹಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವುದನ್ನು ಕಾಣಬಹುದು. ಈ ಎಲ್ಲಾ ಗ್ರಂಥಭಂಡಾರಗಳಲ್ಲಿ ಇಂದಿಗೂ ಬಹಳಷ್ಟು ಅತ್ಯಮೂಲ್ಯವಾದ ಗ್ರಂಥಗಳು ಮತ್ತು ಹಸ್ತಪ್ರತಿಗಳು ಪರಾಮರ್ಶೆಗೆ ದೊರೆಯುತ್ತವೆ.

**ಅಡಿಟಿಪ್ಪಣಿಗಳು**

1. ಮೈಸೂರು ಗೆಜೆಟಿಯರ್, ಪು.ಸ. 112
2. ಎಂ.ಎಂ.ಕಲಬುರ್ಗಿ, ಹಸ್ತಪ್ರತಿ ಅಧ್ಯಯನ, ಪು.ಸ. 23
3. ಆರ್. ನರಸಿಂಹಾಚಾರ್–ಕವಿಚರಿತೆ, ಪು.ಸ. 30

**ಪರಾಮರ್ಶನ ಗ್ರಂಥಗಳು**


- ವಿಶ್ವಕೋಶ. (2006). ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಮೈಸೂರು ಗೆಜೆಟಿಯರ್. (1930). ಕರ್ನಾಟಕ ಸರ್ಕಾರ.
- ನರಸಿಂಹಾಚಾರ್. ಆರ್. (2008). ಕವಿಚರಿತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.